**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ  ನ್ಯಾಯಿಕ ದಂಡಾಧಿಕಾರಿಯವರ**

**ನ್ಯಾಯಾಲಯ , ಗುಂಡ್ಲುಪೇಟೆ**

**ಸಿಸಿ ನಂಃ 752/2018**

| | | |
|---|---|---|
| ಸಾಕ್ಷಿದಾರರ ಹೆಸರು | ಡಾ.  ಶಿವಸ್ವಾಮಿ | ಪ್ರಮಾಣ ಮಾಡಿದ ದಿನಾಂಕಃ 04.03.2025 |
| ತಂದೆ  ಹೆಸರು | ಶ್ರೀ ಶಿವಯ್ಯ | |
| ವಯಸ್ಸು | 51 ವರ್ಷ | |
| ವೃತ್ತಿ | ವೈದ್ಯಾಧಿಕಾರಿ, CIMS ಆಸ್ಪತ್ರೆ, ಚಾಮರಾಜನಗರ | ಚಾಸಾಃ  10 |
| ವಾಸಸ್ಥಳ | ಮೈಸೂರು | ಪ್ರಾಸಾಃ  7 |

**ದಿನಾಂಕಃ 04.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ-**

ದಿಃ11.04.2018 ರಂದು ಸಂಜೆ 4.30 ಗಂಟೆಗೆ ಮಮತಾ ಬಿನ್ ಭುಜಂಗಶೆಟ್ಟಿರವರು ಬೇಗೂರು ಆಸ್ಪತ್ರೆಗೆ ಅಪಘಾತ  ಹಿನ್ನಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು ಅವರನ್ನು ವೈದ್ಯಕೀಯ ಪರೀಕ್ಷೆ ಮಾಡಿದಾಗ ಈ ಕೆಳಕಂಡ ಗಾಯಗಳು ಆಗಿರುವುದು ಕಂಡು ಬಂದಿರುತ್ತದೆ.

1. ಬಲ ಕಾಲಿನ ಮುಂಭಾಗದಲ್ಲಿ ಹರಿತದ ಗಾಯ,
2. ಬಲಗಾಲಿನ ಕೆಳಗಡೆ ಹೂತದ ಗಾಯ,

ನಂತರ ಹೆಚ್ಚಿನ ಚಿಕಿತ್ಸೆಗೆ ಕೆ ಆರ್ ಆಸ್ಪತ್ರೆಗೆ ಸೂಚಿಸಿರುತ್ತೇವೆ.

ಕೆ ಆರ್ ಆಸ್ಪತ್ರೆಯ ವೈದ್ಯರ ವರದಿ ನೋಡಿದಾಗ ಯಾವುದೇ ಮೂಳೆ ಮುರಿತ ಆಗಿರುವುದಿಲ್ಲ. ಆದರೆ ಎಡ ಕಾಲಿನ ಪಾದದಲ್ಲಿ 5ನೇ ಮೂಳೆ ಮುರಿತವಾಗಿರುತ್ತದೆ.

ಮೇಲ್ಕಂಡ ಗಾಯಗಳು ತಾಜಾ ಗಾಯ ಮತ್ತು ತೀವ್ರ ಸ್ವರೂಪದ ಗಾಯವಾಗಿರುತ್ತವೆ ಎಂದು ಅಭಿಪ್ರಾಯಪಟ್ಟು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ11 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–11(ಬಿ) ಎಂದು ಗುರುತಿಸಲಾಯಿತು.

**ಪಾಟಿ ಸವಾಲು– ಆರೋಪಿ ಪರ ಶ್ರೀಮತಿ ಬಿ ವೈಎಲ್ ವಕೀಲರಿಂದಃ**

ಮಮತಾ ರವರು ಆಸ್ಪತ್ರೆಗೆ ನಡೆದುಕೊಂಡು ಬಂದಿರುವುದಿಲ್ಲ. ಬೇರೆಯವರು ಅವರನ್ನು ಕರೆದುಕೊಂಡು ಬಂದಿರುತ್ತಾರೆ. ಯಾರು ಕರೆದುಕೊಂಡು ಬಂದರು ಎಂದು ಅವರ ಹೆಸರು ವಿವರ ನನಗೆ ಗೊತ್ತಿಲ್ಲ. ಮೂಳೆ ಮುರಿತ ಆಗಿದ್ದು, ಅದರ ಅಳತೆಯನ್ನು ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಕಾರಣ ಹೆಚ್ಚಿನ ಚಿಕಿತ್ಸೆಯನ್ನು ನಾನು ನೀಡಿಲ್ಲ. ಮಮತ ರವರಿಗೆ ಆಗಿರುವ ಗಾಯ ಯಾವುದೇ ವ್ಯಕ್ತಿ ನುಣುಪಾದ ನೆಲದ ಮೇಲೆ ನಡೆದುಕೊಂಡು ಹೋಗುತ್ತಿದ್ದಾಗ ಜಾರಿ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಮಮತಾ ರವರಿಗೆ ಯಾವುದೇ ಗಾಯ ಆಗಿಲ್ಲ, ಪಿರ್ಯಾದುದಾರರ ಮಾತನ್ನು ಕೇಳಿಕೊಂಡು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

(ಎ.ಎನ್.ಕಾಂತಮ್ಮ)
**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಗುಂಡ್ಲುಪೇಟೆ**